ಅಂತಹದ್ದನ್ನು ಹುಡುಕಿಕೊಂಡು ಹೋಗುವುದಿಲ್ಲ. ಸುಮ್ಮನೆ ಒಂದು ಕಡೆ ಕೂತಿರುವುದೇ ನನಗೆ ಖುಷಿ. ಬರೆಯುವುದಕ್ಕೆ ಮುನ್ನ ಏನಾದರೂ ಮಾಡಬೇಕು ಅಂತೆಲ್ಲ ಹೇಳುವುದನ್ನು ನಂಬುವುದಿಲ್ಲ. ನಾನು ಆತ್ಮಚರಿತ್ರಾತ್ಮಕವಾಗಿ ಬರೆಯುವುದಿಲ್ಲ. ನಿಜಜೀವನದಲ್ಲಿನ ವ್ಯಕ್ತಿಗಳನ್ನು ಪಾತ್ರಗಳನ್ನಾಗಿಸುವುದರಲ್ಲಿ ಆಸಕ್ತಿಯಿಲ್ಲ. ಮಾರ್ಗರೇಟ್ ಗಾರ್ನರ್ (ಗುಲಾಮಳಾಗಿದ್ದ ಆಫ್ರಿಕನ್ ಅಮೆರಿಕನ್ ಮಹಿಳೆ) ಅಂತಹ ಐತಿಹಾಸಿಕ ವ್ಯಕ್ತಿಯ ಕುರಿತು ಬರೆದಾಗಲೂ ನನಗೆ ಆಕೆಯ ಬಗ್ಗೆ ಏನೂ ಗೊತ್ತಿರಲಿಲ್ಲ. ಆಕೆಯ ಸಂದರ್ಶನಗಳನ್ನು ಓದಿದಾಗ ಅವಳು ಗುಲಾಮಗಿರಿಯಿಂದ ತಪ್ಪಿಸಿಕೊಂಡು ಬಂದಿದ್ದು, ತನ್ನ ಮಗುವನ್ನು ಕೊಂದ ವಿಷಯ ತಿಳಿಯಿತು. ಮತ್ತೊಮ್ಮೆ ಬೇಕಾದರೂ ಕೊಲ್ಲುತ್ತೇನೆ ಎಂದು ಆಕೆ ತಣ್ಣಗೆ ಹೇಳಿದ್ದು ನನ್ನ ಕಲ್ಪನೆಗೆ ಕಿಡಿ ಹೊತ್ತಿಸಿತು.

◆ **ಆಕೆ ಅದಕ್ಕೆ ಸ್ಫೂರ್ತಿಯಾದಳೇ?**

ಹೌದು. ಆಕೆಯ ನಿಜ ಜೀವನ ಕಾದಂಬರಿಯಲ್ಲಿರುವುದಕ್ಕಿಂತ ಭಯಾನಕವಾಗಿತ್ತು. ಅದರ ಬಗ್ಗೆ ನನಗೆ ಗೊತ್ತಿದ್ದರೆ ಖಂಡಿತ ಕಾದಂಬರಿ ಬರೆಯುತ್ತಿರಲಿಲ್ಲ. ಇರುವ ಬದುಕನ್ನು ಬರೆಯುವುದಾದರೆ ನನಗಲ್ಲಿ ಕೆಲಸವಿಲ್ಲ. ಅನ್ವೇಷಣೆಯ ಪ್ರಕ್ರಿಯೆ ನನಗಿಷ್ಟ. ಕಲ್ಪನೆಯ ಸುರುಳಿಯಿಂದ ನಿಧಾನವಾಗಿ ರೂಪು ತಳೆಯುತ್ತಾ ಪಾತ್ರಗಳು ಮೈದಳೆಯುವ ರೀತಿ ಕುತೂಹಲಕರ.

## ಎಲಿಸ್ಸಾ ಶಾಪೆಲ್

ಅಮೆರಿಕದ ಕತೆಗಾರ್ತಿ, ಕಾದಂಬರಿಗಾರ್ತಿ. 'Tin House' ಎನ್ನುವ ಸಾಹಿತ್ಯ ಪತ್ರಿಕೆಯ ಸಂಪಾದಕಿ. 'The Parris Review' ಪತ್ರಿಕೆಯಲ್ಲಿ ಹಿರಿಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. 'Use Me', 'Blueprints for Building Better Girls' ಅವರ ಪ್ರಕಟಿತ ಕೃತಿಗಳು. ಇದಲ್ಲದೆ ಅವರ ಲೇಖನಗಳು ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

## ಕ್ಲೌಡಿಯಾ ಬ್ರಾಡ್ಸ್ಕಿ ಲಕೋರ್

ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ತೌಲನಿಕ ಸಾಹಿತ್ಯ ವಿಭಾಗದಲ್ಲಿ ಪ್ರಾಧ್ಯಾಪಕಿ. ಅವರು ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೃತಿಗಳನ್ನು ಪ್ರಕಟಿಸಿದ್ದಾರೆ. 'Lines of Thought: Discourse', 'Architectonics, and the Origin of Modern Philosophy and Birth of a Nation'Hood: Gaze', 'Script' ಮೊದಲಾದವು ಅವರ ಪ್ರಕಟಿತ ಕೃತಿಗಳು.

## ಹೇಮಾ ಎಸ್.

ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲಕಾಲ ಉದ್ಘೋಷಕಿಯಾಗಿದ್ದರು. ಇಂಗ್ಲಿಷ್ ಹಾಗೂ ಹಿಂದಿಯಿಂದ ಲೇಖನ, ಕತೆ ಹಾಗೂ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಕಟಿತ ಕೃತಿಗಳು: 'ಹೆಸರಿಲ್ಲದ ಹೂ' (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು 'ಉರಿವ ಬನದ ಕೋಗಿಲೆಗಳು' (ಅನುವಾದಿತ ಲೇಖನಗಳ ಸಂಗ್ರಹ). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.